ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 99-107
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ

**ಶಶಿಕುಮಾರ್ ಕೆ. ಆರ್**

ಉಪನ್ಯಾಸಕರು, ಹೆಚ್.ಸಿ.ಬಿ.ಎಮ್ ಕಾಲೇಜು, ಜಗಳೂರು

***Abstract:***

*ಭಾರತೀಯ ಸಮಾಜದಲ್ಲಿ ಮಹಿಳೆಯರು ಕುಟುಂಬ, ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸಿದರೂ, ಆರ್ಥಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣ, ಉದ್ಯೋಗ ಮತ್ತು ಆದಾಯದ ಅವಕಾಶಗಳಲ್ಲಿ ಇನ್ನೂ ಹಿಂದುಳಿದಿದ್ದಾರೆ. ವಿಶೇಷವಾಗಿ ಗ್ರಾಮೀಣ ಮಹಿಳೆಯರು ಬಡತನ, ನಿರುದ್ಯೋಗ ಮತ್ತು ಬಂಡವಾಳದ ಕೊರತೆಯಿಂದ ಆರ್ಥಿಕ ಸ್ವಾವಲಂಬನೆ ಸಾಧಿಸಲು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಸಹಾಯ ಸಂಘಗಳು ಉಳಿತಾಯ, ಸಾಲಸೌಲಭ್ಯ, ಸ್ವಯಂ ಉದ್ಯೋಗ ಮತ್ತು ಆದಾಯ ಗಳಿಕೆಯ ಅವಕಾಶಗಳನ್ನು ಒದಗಿಸುವ ಮೂಲಕ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ಸಹಕಾರಿಯಾಗಿವೆ. ಈ ಅಧ್ಯಯನವು ಮಹಿಳಾ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಕುಟುಂಬದ ನಿರ್ಧಾರಗಳಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಸ್ಥಳೀಯ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಹೆಚ್ಚಾಗುತ್ತದೆ. ಆದ್ದರಿಂದ ಮಹಿಳಾ ಸಬಲೀಕರಣ, ಬಡತನ ನಿವಾರಣೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಸ್ವಸಹಾಯ ಸಂಘಗಳು ಪ್ರಮುಖ ಸಾಧನಗಳಾಗಿವೆ.*

***Keywords:*** *ಮಹಿಳೆ, ಸ್ವಸಹಾಯ ಸಂಘ, ಆರ್ಥಿಕ ಸಬಲೀಕರಣ, ಸ್ವಾವಲಂಬನೆ, ಉದ್ಯೋಗ.*

## ಪೀಠಿಕೆ

ಮಾನವನ ಇತಿಹಾಸವು ಪುರುಷ ಪ್ರಧಾನವಾದ ಇತಿಹಾಸವೇ ಆಗಿದ್ದು, ಜಗತ್ತಿನ ಪ್ರತಿಯೊಂದು ಸಮಾಜಗಳಲ್ಲಿಯೂ ಮಹಿಳೆಯರನ್ನು ಕಾಣುವ ದೃಷ್ಟಿಕೋನ ಸಮಾಜದಿಂದ ಸಮಾಜಕ್ಕೆ ವೈವಿಧ್ಯಮಯವಾಗಿರುತ್ತವೆ. ಒಟ್ಟು ಜನಸಂಖ್ಯೆಯ ಅರ್ಧಭಾಗದಷ್ಟು ಇರುವ ಮಹಿಳೆಯರು ಇಂದು ಜಗತ್ತಿನಾದ್ಯಂತ ದ್ವಿತೀಯ ದರ್ಜೆಯ ಪ್ರಜೆಗಳೆಂದು ಪರಿಗಣಿಸಲ್ಪಟ್ಟಿದ್ದಾರೆ. ಸ್ತ್ರೀಯರು ಹೊಂದಿರುವ ಸ್ಥಾನಮಾನದ ಮೂಲಕ ಆಯಾ ಸಮಾಜಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹಾಗೂ ನಾಗರೀಕತೆಯ ಮುನ್ನಡೆಯನ್ನು ಅಳೆಯಬಹುದಾಗಿದೆ. ಮಹಿಳೆಯರು ಅನೇಕ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುರುಷನಿಗೆ ಸರಿಸಮಾನವಾದ ಸ್ಥಾನಮಾನಗಳನ್ನು ಹೊಂದದೇ ಲಿಂಗ ಅಸಮಾನತೆಯಿಂದ ಅಭಿವೃದ್ಧಿಯಲ್ಲಿ ಸಮಪಾಲು ಪಡೆಯದೆ ವಂಚಿತರಾಗಿದ್ದಾರೆ. ಈಗಾಗಲೇ ಅಭಿವೃದ್ಧಿ ಹೊಂದಿರುವ ಅಮೇರಿಕಾದಂತಹ ರಾಷ್ಟ್ರಗಳಲ್ಲೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ಲಿಂಗತಾರತಮ್ಯ ಅಸ್ತಿತ್ವದಲ್ಲಿದ್ದು, ಮಹಿಳೆಯರು ಶೋಷಣೆಗೆ ಗುರಿಯಾಗಿದ್ದಾರೆ.

***Please cite this article as:*** ಶಶಿಕುಮಾರ್, ಕೆ. ಆರ್. (2026). ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 99–107

ಮಹಿಳೆಯರ ಸಾಮಾಜಿಕ – ಆರ್ಥಿಕ ದುರ್ಬಲತೆಗೆ ಸಮಾಜ ಕಾರಣವೇ ಹೊರತು ಮಹಿಳೆಯರಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಮಹಿಳೆಯರು ಅರ್ಥವ್ಯವಸ್ಥೆಯಲ್ಲಿ ಸ್ವಾವಲಂಬಿಗಳಾಗಿರದೇ ಉತ್ಪಾದಕ ಕ್ರಿಯೆಯಲ್ಲಿ ಕೇವಲ ಪುರುಷರ ಸಹಭಾಗಿಗಳಾಗಿ ಮಾತ್ರ ದುಡಿಯುತ್ತಿದ್ದಾರೆ. ಸಾಕ್ಷರತೆ ಮತ್ತು ವೃತ್ತಿಪರ ತರಬೇತಿಗಳ ಅಭಾವವು ಮಹಿಳೆಯರನ್ನು ಆಧುನಿಕ ಅರ್ಥವ್ಯವಸ್ಥೆಯಿಂದ ಹೊರಗಿಟ್ಟಿದೆ. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಯಶಸ್ಸುಗಳಿಸಿರುವ ಮಹಿಳೆಯರನ್ನು ಇಂದಿಗೂ ಸಹ ಅವಕಾಶಗಳಿಂದ ವಂಚಿತಗೊಳಿಸುವಂತಹ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದ್ದು, ಮಹಿಳೆಯರ ಶೋಷಣೆ ಇಂದು ನಿನ್ನೆಯದಲ್ಲ. ಹಾಗೆಯೇ ಕೇವಲ ಭಾರತೀಯ ಸಮಾಜಕ್ಕೆ ಸೀಮಿತವಾದುದಲ್ಲ. ಈ ರೀತಿಯ ಶೋಷಣೆಗಳು ಇಡೀ ವಿಶ್ವದ ಉದ್ದಗಲಕ್ಕೂ ಹರಡಿಕೊಂಡಿದೆ. ಉದಾರೀಕರಣ ಮತ್ತು ಜಾಗತೀಕರಣದ ಕಾಲದಲ್ಲಿ ಇದರ ಸ್ವರೂಪ ತೀವ್ರವಾಗಿದೆ.

ಭಾರತದ ಸಂವಿಧಾನವು ಅಳವಡಿಸಿಕೊಂಡಿರುವ ಕಲ್ಯಾಣ ರಾಜ್ಯ ಪರಿಕಲ್ಪನೆ ಮತ್ತು ಸಾಮಾಜಿಕ ನ್ಯಾಯಾಧಾರಿತ ಸಮಾನತೆಯು ಸಮಾಜದ ಅಂಚಿನ ವರ್ಗವಾಗಿ ಬದುಕುತ್ತಿರುವ ಮಹಿಳೆಯರಿಗೆ ಅತ್ಯಂತ ಉಪಯುಕ್ತವಾದುದಾಗಿದೆ. ಸಂವಿಧಾನದ 14, 15, 16 ಮತ್ತು 23ನೇ ವಿಧಿಗಳಲ್ಲಿ ಮಹಿಳೆಯರಿಗೆ ನ್ಯಾಯ ಒದಗಿಸುವ ಪ್ರಮುಖ ಅಂಶಗಳು ಸೇರ್ಪಡೆಗೊಂಡವು. ಈ ಅವಧಿಯಲ್ಲಿ ಜಾರಿಗೊಳಿಸಲಾದ ಶಾಸನಗಳು, ಶಿಕ್ಷಣ, ಉದ್ಯೋಗ ಮತ್ತು ರಾಜಕೀಯದಲ್ಲಿ ನೀಡಲಾದ ಮೀಸಲಾತಿಗಳು ಹಾಗೂ ಮಹಿಳೆಯರ ಶ್ರೇಯೋಭಿವೃದ್ಧಿಗೆ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ವಿಪುಲ ಅವಕಾಶಗಳನ್ನು ಸೃಷ್ಟಿಸಿ, ಅವರ ಸ್ಥಾನಮಾನದಲ್ಲಿ ವ್ಯಾಪಕ ಬದಲಾವಣೆಯಾಗಲು ಕಾರಣವಾದವು.

**ಸ್ವಸಹಾಯ ಸಂಘಗಳು – ಮಹಿಳಾ ಸಬಲೀಕರಣದ ಹೊಸ ಆಶಾಕಿರಣ**

ಆಧುನಿಕತೆಯು ಸ್ತ್ರೀಯರಿಗೆ ಒದಗಿಸಿರುವ ವಿಪುಲ ಅವಕಾಶಗಳಲ್ಲಿ ಸ್ವಸಹಾಯ ಸಂಘಗಳು ಕೂಡ ಒಂದಾಗಿದ್ದು, 1985ರ ಅವಧಿಯಲ್ಲಿ ದೇಶದಾದ್ಯಂತ ವ್ಯಾಪಕವಾಗಿ ರೂಪುಗೊಂಡ ಸ್ವಸಹಾಯ ಸಂಘಗಳು ಸ್ತ್ರೀಯರನ್ನು ಚಿಕ್ಕ, ಚಿಕ್ಕ ಸಮೂಹಗಳಾಗಿ ಸಂಘಟಿಸಿ, ಉಳಿತಾಯ ಮನೋಭಾವನೆಯನ್ನು ಪ್ರೇರೆಪಿಸಿ, ಸಾಮಾಜಿಕ, ಆರ್ಥಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿ ಬಡತನ ನಿರ್ಮೂಲನೆಗೆ ನಾಂದಿ ಹಾಡಬಲ್ಲ ಆಶಾಕಿರಣಗಳಾಗಿವೆ. ಸ್ವಸಹಾಯ ಸಂಘಗಳು ಪ್ರಸ್ತುತ ಪ್ರಚಲಿತದಲ್ಲಿರುವ ಕಾರ್ಯಕ್ರಮಗಳಿಗಿಂತ ಭಿನ್ನವಾಗಿದ್ದು, ಮಹಿಳಾ ಸಹಭಾಗಿತ್ವವನ್ನು ಪ್ರತಿನಿಧಿಸುವ ಒಂದು ಮಾದರಿಯಾಗಿದೆ. ಮಹಿಳಾ ಸಬಲೀಕರಣ ಮತ್ತು ಬಡತನ ನಿವಾರಣೆಯಲ್ಲಿ ಇದು ಪರಿಣಾಮಕಾರಿಯಾದ ಕಾರ್ಯತಂತ್ರವಾಗಿದೆ. ಸರ್ಕಾರದ ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯವನ್ನು, ಅದರಲ್ಲಿಯೂ ವಿಶೇಷವಾಗಿ ಮಹಿಳೆಯರ ಸಹಭಾಗಿತ್ವವನ್ನು ಹೆಚ್ಚಿಸುವಲ್ಲಿ ಸ್ವಸಹಾಯ ಗುಂಪುಗಳು ಅತ್ಯಂತ ಜನಪ್ರಿಯ ಸಾಧನವಾಗಿ ಹೊರಹೊಮ್ಮಿವೆ ಮಹಿಳೆಯರು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವುದರಿಂದ ಅವುಗಳ ಸದುಪಯೋಗ ಪಡೆಯುವ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಭ್ಯುದಯ ಸಾಧಿಸಲು ಸಹಕಾರಿಯಾಗಿದೆ.

**ಸ್ವಸಹಾಯ ಗುಂಪುಗಳು**

ಸ್ವಸಹಾಯ ಗುಂಪುಗಳು ಸಂಘಟಿತ ಗ್ರಾಮೀಣ ಮಹಿಳೆಯರ ಗುಂಪಿನ ಮೂಲಕ ನಿರ್ವಹಿಸಲ್ಪಡುವ ಹಣಕಾಸಿನ ವ್ಯವಹಾರದ ಘಟಕಗಳಾಗಿವೆ. ಈ ರೀತಿಯ ಗುಂಪುಗಳು ತಮ್ಮ ಉಳಿತಾಯದಿಂದ ಹಣಕಾಸು ಸಂಪನ್ಮೂಲಗಳನ್ನು ಕ್ರೋಢೀಕರಿಸಿ,

ಮಹಿಳೆಯರನ್ನು ಉದ್ಯೋಗಸ್ಥರನ್ನಾಗಿಸಲು ಅಗತ್ಯವಿರುವ ಸಣ್ಣ ಪ್ರಮಾಣದ ಸಾಲ ಸೌಲಭ್ಯವನ್ನು ಒದಗಿಸುವ ಹಾಗೂ ಔದ್ಯೋಗಿಕ ಚಟುವಟಿಕೆಯಲ್ಲಿ ತೊಡಗಲು ಉತ್ತೇಜಿಸುವ ಒಂದು ಸಂಘಟಿತ ವ್ಯವಸ್ಥೆಯಾಗಿದೆ. ಬಡ ಮಹಿಳೆಯರನ್ನು ಸ್ವಯಂ ಪ್ರೇರಿತವಾಗಿ ತಮ್ಮ ಜೀವನದ ಅಭಿವೃದ್ಧಿಗಾಗಿ ಸಮಾನ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು, ಅವರ ಕೌಶಲ್ಯ, ಸಂಪನ್ಮೂಲ ಮತ್ತು ಜ್ಞಾನವನ್ನು ತೊಡಗಿಸಿ ನ್ಯಾಯಯುತವಾಗಿ ಪಡೆಯಬೇಕಾದ ಸೌಲಭ್ಯವನ್ನು ಪಡೆದುಕೊಳ್ಳಲು ಪ್ರೇರೇಪಿಸುವ ಒಂದು ಪರಿಣಾಮಕಾರಿಯಾದ ವೇದಿಕೆಯಾಗಿದೆ. ಸ್ವಸಹಾಯ ಗುಂಪುಗಳು ಪ್ರತಿಯೊಬ್ಬರೂ ಎಲ್ಲರಿಗಾಗಿ ಮತ್ತು ಎಲ್ಲರೂ ಪ್ರತಿಯೊಬ್ಬನಿಗಾಗಿ (One for All and All for One) ಎಂಬ ಸಹಕಾರದ ತತ್ವವನ್ನು ಆವರಿಸಿ ರಚಿತವಾಗಿರುತ್ತವೆ. ಇವು ಸದಸ್ಯರಲ್ಲಿ ಉಳಿತಾಯದ ಮನೋಭಾವನೆಯನ್ನು ಬೆಳೆಸಿ, ಉಳಿತಾಯ ಮೊತ್ತದಿಂದ ಹಾಗೂ ಬ್ಯಾಂಕಿನಿಂದ ಪಡೆಯುವಿಕೆ. ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವಿಕೆ, ಗುಂಪು ಚಟುವಟಿಕೆಯನ್ನು ಕೈಗೊಳ್ಳುವಿಕೆ, ಕಿರುಉದ್ಯಮಗಳ ಸ್ಥಾಪನೆ ಹಾಗೂ ಸದಸ್ಯರ ಆರ್ಥಿಕ ಪ್ರಗತಿ ಸಾಧನೆಗೆ ಮಾತ್ರವಲ್ಲದೇ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ವಿಕಾಸಕ್ಕೂ ನೆರವಾಗುವ ಉದ್ದೇಶವನ್ನು ಹೊಂದಿದೆ. ಸ್ವಸಹಾಯ ಸಂಘಗಳು ತಮ್ಮ ಉದ್ದೇಶಗಳ ಈಡೇರಿಕೆಗೆ ಕೆಲವೊಂದು ನಿಯಮ ಮತ್ತು ನಿರ್ಬಂಧನೆಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರತಿವಾರವು ಸಂಘಗಳು ಸಭೆ ನಡೆಸುತ್ತಿದ್ದು, ತಮ್ಮ ಗುಂಪಿನಲ್ಲಿ ಇಬ್ಬರು ಸದಸ್ಯರನ್ನು ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿಕೊಂಡು ಗುಂಪಿನ ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸಲಾಗುತ್ತದೆ. ಆರು ತಿಂಗಳಿಗೊಮ್ಮೆ ಬದಲಾಯಿಸಬೇಕಾಗಿರುತ್ತದೆ. ಪ್ರತಿ ಗುಂಪು ಲೆಕ್ಕಪತ್ರಗಳನ್ನು ಮತ್ತು ವ್ಯವಹಾರದ ಪುಸ್ತಕಗಳನ್ನು ನಿರ್ವಹಿಸಬೇಕಾಗುತ್ತದೆ. ಪ್ರತಿಯೊಬ್ಬ ಸದಸ್ಯೆಯ ಉಳಿತಾಯ ಮಾಡಬೇಕಾದ ಮೊಬಲಗನ್ನು ಗುಂಪು ನಿರ್ಧರಿಸುತ್ತದೆ. ಪ್ರತಿವಾರವೂ ಕೂಡಿಟ್ಟ ಉಳಿತಾಯ ಹಣವನ್ನು ಬ್ಯಾಂಕಿನಲ್ಲಿರುವ ಗುಂಪಿನ ಖಾತೆಗೆ ಜಮಾ ಮಾಡಲಾಗುತ್ತದೆ.

**ಅಧ್ಯಯನದ ಉದ್ದೇಶಗಳು**

- ಮಹಿಳೆಯರ ಆರ್ಥಿಕ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರಗಳನ್ನು ತಿಳಿಯುವುದು.
- ಸ್ವಾವಲಂಭಿ ಮಹಿಳೆಯರನ್ನಾಗಿಸಲು ಸ್ವಸಹಾಯ ಸಂಘಗಳು ಕೈಗೊಂಡಿರುವ ಯೋಜನೆಗಳನ್ನು ಅಧ್ಯಯಿನಿಸುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಅವಲೋಕನ, ಕ್ಷೇತ್ರಕಾರ್ಯ, ಗುಂಪು ಚರ್ಚೆ ಹಾಗೂ ಪ್ರಕರಣ ಅಧ್ಯಯನದ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಗಳನ್ನು ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಗ್ರಂಥಗಳು, ಪುಸ್ತಕಗಳು, ಸಮೀಕ್ಷಾ ವರದಿಗಳು, ಪತ್ರಿಕೆಗಳು, ಅಂತರ್ಜಾಲ, ಮಹಾಪ್ರಬಂಧಗಳು, ವಿಶ್ವಕೋಶಗಳು ಇನ್ನೂ ಮುಂತಾದ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ಕ್ಷೇತ್ರ ಮತ್ತು ಮಾದರಿ ಆಯ್ಕೆ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಜಗಳೂರು ನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಜಗಳೂರು ನಗರದಲ್ಲಿರುವ ವಿವಿಧ ಮಹಿಳಾ ಸ್ವ-ಸಹಾಯ ಸಂಘಗಳಲ್ಲಿನ 50 ಮಹಿಳೆಯರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಸ್ವಸಹಾಯ ಸಂಘಗಳ ಸದಸ್ಯರಿಗೆ ಆರ್ಥಿಕ ಅವಕಾಶಗಳನ್ನು ಒದಗಿಸಿಕೊಡುವುದರ ಜೊತೆಗೆ

ಸದಸ್ಯರಲ್ಲಿ ನಾಯಕತ್ವದ ಗುಣವನ್ನು ಬೆಳೆಸಿ ತಮ್ಮ ಮೇಲಾಗುವ ದೌರ್ಜನ್ಯಗಳನ್ನು ಪ್ರತಿಭಟಿಸುವ ಹಾಗೂ ತಮ್ಮ ಸಮಸ್ಯೆಗಳಿಗೆ ಪರಸ್ಪರ ಸಹಕರಿಸಿ ಪರಿಹರಿಸಿಕೊಳ್ಳುವಂತೆ ಮಾಡುವ ಮೂಲಕ ಬಡ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ಉದ್ದೇಶವನ್ನು ಹೊಂದಿದೆ ಈ ಸಂಘಗಳು ಸದಸ್ಯರಿಗೆ ಸಂಘದ ಸಭೆಗಳಲ್ಲಿ ಸಭಾಧ್ಯಕ್ಷರನ್ನು ಆಯ್ಕೆ ಮಾಡುವುದು ಪ್ರಾರ್ಥನೆ, ಸ್ವಾಗತ ಭಾಷಣ ಮಾಡುವುದು ಹಾಗೂ ನಿರ್ಧಿಷ್ಟ ವಿಷಯದ ಬಗ್ಗೆ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡುವ ಮೂಲಕ ಸದಸ್ಯರಲ್ಲಿ ನಾಯಕತ್ವದ ಗುಣವನ್ನು ಬೆಳೆಸುತ್ತವೆ. ಸದಸ್ಯರಲ್ಲಿ ನಾಯಕತ್ವದ ಗುಣವನ್ನು ಬೆಳೆಸುವಲ್ಲಿ ಸೂಚನಾದಾರ ಸಂಘಗಳ ಪಾತ್ರದ ವಿವರವನ್ನು ಕೆಳಕಂಡ ಕೋಷ್ಟಕದಿಂದ ತಿಳಿಯಬಹುದಾಗಿದೆ.

**ಕೋಷ್ಟಕ 1.1: ಸದಸ್ಯರಲ್ಲಿ ನಾಯಕತ್ವ ಗುಣವನ್ನು ಬೆಳೆಸುವಲ್ಲಿ ಸ್ವಸಹಾಯ ಸಂಘಗಳು ಕೈಗೊಂಡಿರುವ ಪಾತ್ರದ ವಿವರ**

| ಪ್ರಮುಖ ಪಾತ್ರಗಳು | ಆವೃತ್ತಿ (n=50) | ಶೇಕಡವಾರು |
|---|---|---|
| ನಿರ್ಧಾರ ಕೈಗೊಳ್ಳುವ ಸಾಮರ್ಥ | 35 | 70.0 |
| ಸಭೆ ನಡೆಸುವ ಅನುಭವ | 20 | 40.0 |
| ಆತ್ಮ ವಿಶ್ವಾಸದ ಬೆಳವಣಿಗೆ | 27 | 54.0 |
| ಸಂವಹನ ಕೌಶಲ್ಯ | 29 | 58.0 |
| ಆರ್ಥಿಕ ನಾಯಕತ್ವ | 45 | 90.0 |

ಮೇಲಿನ ಕೋಷ್ಟಕದಿಂದ ವ್ಯಕ್ತವಾಗುವುದೇನೆಂದರೆ ಶೇಕಡ 70ರಷ್ಟು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಶೇಕಡ 40ರಷ್ಟು ಸಭೆ ನಡೆಸುವ ಅನುಭವ, ಶೇಕಡ 54ರಷ್ಟು ಆತ್ಮವಿಶ್ವಾಸದ ಬೆಳವಣಿಗೆ, ಶೇಕಡ 58ರಷ್ಟು ಸಂವಹನ ಕೌಶಲ್ಯ ಹಾಗೂ ಶೇಕಡ 90ರಷ್ಟು ಆರ್ಥಿಕ ನಾಯಕತ್ವವನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ಹೆಚ್ಚಿನದಾಗಿ ಶೇಕಡ 90ರಷ್ಟು ಸಂವಹನ ಆರ್ಥಿಕ ನಾಯಕತ್ವವನ್ನು ಹೊಂದಿರುವುದನ್ನು ಗಮನಿಸಿದಾಗ ಹೆಚ್ಚಿನ ಮಹಿಳೆಯರು ಸ್ವಸಹಾಯ ಗುಂಪುಗಳಿಗೆ ಸೇರುವುದರ ಹಿಂದಿನ ಉದ್ದೇಶ ಆರ್ಥಿಕ ಅಂಶಗಳನ್ನು ಆಧರಿಸಿಯೇ ಇರುತ್ತದೆ. ಹಾಗಾಗಿ ಅವರು ತಮ್ಮ ಆರ್ಥಿಕ ಅಭಿವೃದ್ಧಿಯ ಜೊತೆಗೆ ಸ್ವಾವಲಂಭಿ ಬದುಕನ್ನು ಕಟ್ಟಿಕೊಳ್ಳಲು ಈ ರೀತಿಯ ಸಂಘಗಳನ್ನು ಸೇರುವುದರ ಜೊತೆಗೆ ಮಹಿಳಾ ಸಬಲೀಕರಣದತ್ತ ಸಾಗುತ್ತಿದ್ದಾರೆ. ಹಾಗಾಗಿ ಮಹಿಳೆಯರ ಆರ್ಥಿಕ ನಿರ್ಧಾರಕಗಳು ಅಭಿವೃದ್ಧಿ, ಬದಲಾವಣೆ, ಸ್ವಾವಲಂಬನೆ ಹಾಗೂ ಸಬಲೀಕರಣದಂತಹ ಅಂಶಗಳನ್ನು ಬಲಪಡಿಸುವಲ್ಲಿ ಸಹಕಾರಿಯಾಗಿವೆ.

**ಉಳಿತಾಯ**

ಸ್ವಸಹಾಯ ಸಂಘಗಳು ಮಹಿಳೆಯರಲ್ಲಿ ಉಳಿತಾಯದ ಮನೋಭಾವವನ್ನು ಬೆಳೆಸುವುದರ ಜೊತೆಗೆ, ಸಣ್ಣ ಪ್ರಮಾಣದಲ್ಲಿ ಹಣಕಾಸು ನಿರ್ವಹಣೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಸಂಘದ ನಿಯಮಿತ ಉಳಿತಾಯದಿಂದ ಮಹಿಳೆಯರು ತಮ್ಮ ಆದಾಯವನ್ನು ಯೋಜಿತವಾಗಿ ಬಳಸಲು ಹಾಗೂ ಭವಿಷ್ಯದ ಅಗತ್ಯಗಳಿಗಾಗಿ ಹಣವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಸದಸ್ಯ ಮಹಿಳೆಯರಲ್ಲಿ ಉಳಿತಾಯ ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ಉಂಟಾದ ಬದಲಾವಣೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 1.2: ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಉಳಿತಾಯ ಮತ್ತು ಆರ್ಥಿಕ ಸಾಮರ್ಥ್ಯದ ವಿವರ**

| ಉಳಿತಾಯ ಮತ್ತು ಆರ್ಥಿಕ ಸಾಮರ್ಥ್ಯ | ಆವೃತ್ತಿ (n=50) | ಶೇಕಡವಾರು |
|---|---|---|
| ನಿಯಮಿತವಾಗಿ ಉಳಿತಾಯ ಮಾಡುವ ಅಭ್ಯಾಸ ಬೆಳೆದಿದೆ | 42 | 84.0 |
| ತುರ್ತು ಸಂದರ್ಭಗಳಿಗೆ ಹಣ ಉಳಿಸುವಂತಾಗಿದೆ | 38 | 76.0 |

| | | |
|---|---|---|
| ಸ್ವಂತ ಆದಾಯವನ್ನು ನಿರ್ವಹಿಸುವ ಸಾಮರ್ಥ್ಯ ಹೆಚ್ಚಾಗಿದೆ | 35 | 70.0 |
| ಕುಟುಂಬದ ಹಣಕಾಸು ಯೋಜನೆಯಲ್ಲಿ ಭಾಗವಹಿಸುವಿಕೆ ಹೆಚ್ಚಾಗಿದೆ | 40 | 80.0 |
| ಭವಿಷ್ಯದ ಆರ್ಥಿಕ ಅಗತ್ಯಗಳ ಬಗ್ಗೆ ಅರಿವು ಹೆಚ್ಚಾಗಿದೆ | 44 | 88.0 |

ಮೇಲಿನ ಕೋಷ್ಟಕದಿಂದ ತಿಳಿದುಬರುವಂತೆ, ಸ್ವಸಹಾಯ ಸಂಘಗಳ ಸದಸ್ಯತ್ವವು ಮಹಿಳೆಯರ ಉಳಿತಾಯ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಒಟ್ಟು 50 ಮಾಹಿತಿದಾರರಲ್ಲಿ ಶೇಕಡ 84ರಷ್ಟು ಮಹಿಳೆಯರು ನಿಯಮಿತ ಉಳಿತಾಯದ ಅಭ್ಯಾಸ ಬೆಳೆದಿದೆ ಎಂದು ತಿಳಿಸಿದರೆ, ಶೇಕಡ 76ರಷ್ಟು ಮಹಿಳೆಯರು ತುರ್ತು ಸಂದರ್ಭಗಳಲ್ಲಿ ಬಳಸಲು ಹಣ ಉಳಿಸುವಂತಾಗಿದೆ ಎಂದೂ, ಶೇಕಡ 70ರಷ್ಟು ಮಹಿಳೆಯರಲ್ಲಿ ಸ್ವಂತ ಆದಾಯವನ್ನು ನಿರ್ವಹಿಸುವ ಸಾಮರ್ಥ್ಯ ಹೆಚ್ಚಾಗಿದೆ, ಶೇಕಡ 80ರಷ್ಟು ಮಹಿಳೆಯರು ಕುಟುಂಬದ ಹಣಕಾಸು ಯೋಜನೆಯಲ್ಲಿ ತಮ್ಮ ಭಾಗವಹಿಸುವಿಕೆ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಹಾಗೂ ಶೇಕಡ 88ರಷ್ಟು ಮಹಿಳೆಯರಿಗೆ ಭವಿಷ್ಯದ ಆರ್ಥಿಕ ಅಗತ್ಯಗಳ ಬಗ್ಗೆ ಅರಿವು ಹೆಚ್ಚಾಗಿದೆ ಎಂಬುದು ತಿಳಿದು ಬಂದಿದೆ. ಅರ್ಥಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ, ಉಳಿತಾಯವು ಬಂಡವಾಳ ನಿರ್ಮಾಣದ ಪ್ರಮುಖ ಆಧಾರವಾಗಿದೆ. ಮಹಿಳೆಯರು ಸಣ್ಣ ಪ್ರಮಾಣದಲ್ಲಿ ನಿಯಮಿತವಾಗಿ ಉಳಿತಾಯ ಮಾಡುವುದರಿಂದ ಅವರ ಆರ್ಥಿಕ ಭದ್ರತೆ ಹೆಚ್ಚುತ್ತದೆ. ಇದರಿಂದ ಕುಟುಂಬದ ಆರ್ಥಿಕ ಸ್ಥಿರತೆ ಸುಧಾರಿಸುವುದರ ಜೊತೆಗೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಯೂ ಹೆಚ್ಚುತ್ತದೆ.

**ಸ್ವಸಹಾಯ ಸಂಘಗಳ ಸಾಲ**

ಸ್ವಸಹಾಯ ಸಂಘಗಳ ಪ್ರಮುಖ ಉದ್ದೇಶಗಳಲ್ಲಿ ಒಂದಾದ ಸಣ್ಣ ಸಾಲ ಸೌಲಭ್ಯವು ಮಹಿಳೆಯರಿಗೆ ಸ್ವಯಂ ಉದ್ಯೋಗ ಮತ್ತು ಆದಾಯ ಗಳಿಸುವ ಅವಕಾಶವನ್ನು ಒದಗಿಸುತ್ತದೆ. ಬ್ಯಾಂಕ್ ಅಥವಾ ಇತರ ಹಣಕಾಸು ಸಂಸ್ಥೆಗಳಿಗಿಂತ ಸಂಘದ ಮೂಲಕ ಸಾಲ ಪಡೆಯುವುದು ಕೆಲವು ಸಂದರ್ಭಗಳಲ್ಲಿ ಸುಲಭವಾಗಿರುವುದರಿಂದ ಮಹಿಳೆಯರು ಸಣ್ಣ ಉದ್ಯಮಗಳನ್ನು ಆರಂಭಿಸಲು ಸಾಧ್ಯವಾಗುತ್ತದೆ. ಇದರ ಪರಿಣಾಮವನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ 1.3: ಸ್ವಸಹಾಯ ಸಂಘಗಳ ಸಾಲ ಸೌಲಭ್ಯದಿಂದ ಮಹಿಳೆಯರ ಆದಾಯ ಮತ್ತು ಉದ್ಯೋಗಾವಕಾಶದಲ್ಲಿ ಉಂಟಾದ ಬದಲಾವಣೆಯ ವಿವರ**

| ಸಾಲ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಬದಲಾವಣೆ | ಆವೃತ್ತಿ (n=50) | ಶೇಕಡವಾರು |
|---|---|---|
| ಸ್ವಯಂ ಉದ್ಯೋಗ ಆರಂಭಿಸಲು ಸಾಲ ಪಡೆದಿದ್ದಾರೆ | 36 | 72.0 |
| ಸಣ್ಣ ಉದ್ಯಮ/ವ್ಯವಹಾರ ಆರಂಭಿಸಿದ್ದಾರೆ | 32 | 64.0 |
| ಕುಟುಂಬದ ಆದಾಯದಲ್ಲಿ ಕೊಡುಗೆ ನೀಡುತ್ತಿದ್ದಾರೆ | 41 | 82.0 |
| ಉದ್ಯೋಗದ ಅವಕಾಶಗಳು ಹೆಚ್ಚಾಗಿವೆ | 34 | 68.0 |
| ಮಹಿಳೆಯರ ಸ್ವಂತ ಆದಾಯ ಹೆಚ್ಚಾಗಿದೆ | 37 | 74.0 |

ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ, ಸ್ವಸಹಾಯ ಸಂಘಗಳ ಸಾಲ ಸೌಲಭ್ಯವು ಮಹಿಳೆಯರ ಆದಾಯ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವಲ್ಲಿ

ಸಹಕಾರಿಯಾಗಿದೆ ಎಂದು ತಿಳಿದುಬರುತ್ತದೆ. ಒಟ್ಟು 50 ಮಾಹಿತಿದಾರರಲ್ಲಿ ಶೇಕಡ 72ರಷ್ಟು ಮಹಿಳೆಯರು ಸ್ವಯಂ ಉದ್ಯೋಗಕ್ಕಾಗಿ ಸಾಲ ಪಡೆದಿದ್ದರೆ, ಶೇಕಡ 64ರಷ್ಟು ಮಹಿಳೆಯರು ಸಾಲದ ಸಹಾಯದಿಂದ ಸಣ್ಣ ಉದ್ಯಮ ಅಥವಾ ವ್ಯವಹಾರವನ್ನು ಪ್ರಾರಂಭಿಸಿದ್ದಾರೆ, ಶೇಕಡ 82ರಷ್ಟು ಮಹಿಳೆಯರು ಕುಟುಂಬದ ಆದಾಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ, ಶೇಕಡ 68ರಷ್ಟು ಮಹಿಳೆಯರಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ ಮತ್ತು ಶೇಕಡ 74ರಷ್ಟು ಮಹಿಳೆಯರ ಸ್ವಂತ ಆದಾಯದಲ್ಲಿ ಏರಿಕೆಯಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಇದರಿಂದ ತಿಳಿದುಬರುವುದೇನೆಂದರೆ, ಸ್ವಸಹಾಯ ಸಂಘಗಳ ಸಾಲವು ಉತ್ಪಾದಕ ಬಂಡವಾಳವಾಗಿ ಕಾರ್ಯನಿರ್ವಹಿಸುತ್ತದೆ. ಸಾಲವನ್ನು ಸಣ್ಣ ಉದ್ಯಮ, ಪಶುಸಂಗೋಪನೆ, ಹೊಲಿಗೆ, ಆಹಾರ ಉತ್ಪಾದನೆ, ವ್ಯಾಪಾರ ಮುಂತಾದ ಚಟುವಟಿಕೆಗಳಿಗೆ ಬಳಸುವುದರಿಂದ ಮಹಿಳೆಯರಿಗೆ ಆದಾಯದ ಮೂಲ ಸೃಷ್ಟಿಯಾಗುತ್ತದೆ. ಇದರಿಂದ ನಿರುದ್ಯೋಗ ಕಡಿಮೆಯಾಗುವುದರ ಜೊತೆಗೆ ಕುಟುಂಬದ ತಲಾ ಆದಾಯ ಮತ್ತು ಜೀವನಮಟ್ಟ ಸುಧಾರಿಸಲು ಸಹಾಯವಾಗುತ್ತದೆ.

**ಆರ್ಥಿಕ ನಿರ್ಧಾರ ಮತ್ತು ಕುಟುಂಬದ ನಿರ್ಧಾರ**

ಸ್ವಸಹಾಯ ಸಂಘಗಳ ಚಟುವಟಿಕೆಗಳು ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಮಾತ್ರವಲ್ಲದೆ, ಕುಟುಂಬದ ಪ್ರಮುಖ ನಿರ್ಧಾರಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಕೂಡ ಹೆಚ್ಚಿಸುತ್ತವೆ. ಆದಾಯ ಗಳಿಸುವ ಅವಕಾಶ ಮತ್ತು ಹಣಕಾಸಿನ ಅರಿವು ಹೆಚ್ಚಾದಂತೆ ಮಹಿಳೆಯರು ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಹೆಚ್ಚಿನ ಪಾತ್ರ ವಹಿಸಲು ಪ್ರಾರಂಭಿಸುತ್ತಾರೆ. ಇದರ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 1.4: ಸ್ವಸಹಾಯ ಸಂಘಗಳಿಂದ ಮಹಿಳೆಯರ ಆರ್ಥಿಕ ನಿರ್ಧಾರ ಮತ್ತು ಕುಟುಂಬದ ನಿರ್ಧಾರಗಳಲ್ಲಿ ಭಾಗವಹಿಸುವಿಕೆ**

| ಆರ್ಥಿಕ ಮತ್ತು ಕುಟುಂಬದ ನಿರ್ಧಾರಗಳಲ್ಲಿ ಭಾಗವಹಿಸುವಿಕೆ | ಆವೃತ್ತಿ (n=50) | ಶೇಕಡವಾರು |
|---|---|---|
| ಕುಟುಂಬದ ಆದಾಯ–ವೆಚ್ಚದ ನಿರ್ಧಾರದಲ್ಲಿ ಭಾಗವಹಿಸುತ್ತಾರೆ | 39 | 78 |
| ಮಕ್ಕಳ ಶಿಕ್ಷಣದ ವೆಚ್ಚದ ನಿರ್ಧಾರದಲ್ಲಿ ಭಾಗವಹಿಸುತ್ತಾರೆ | 43 | 86 |
| ಆಸ್ತಿ ಅಥವಾ ಉಳಿತಾಯದ ನಿರ್ಧಾರದಲ್ಲಿ ಭಾಗವಹಿಸುತ್ತಾರೆ | 31 | 62 |
| ಸ್ವಂತ ಆದಾಯವನ್ನು ಹೇಗೆ ಬಳಸಬೇಕು ಎಂಬುದನ್ನು ನಿರ್ಧರಿಸುತ್ತಾರೆ | 40 | 80 |
| ಕುಟುಂಬದ ಪ್ರಮುಖ ಆರ್ಥಿಕ ನಿರ್ಧಾರಗಳಲ್ಲಿ ಅಭಿಪ್ರಾಯ ನೀಡುತ್ತಾರೆ | 42 | 84 |

ಮೇಲಿನ ಕೋಷ್ಟಕದಿಂದ ಸ್ವಸಹಾಯ ಸಂಘಗಳ ಸದಸ್ಯತ್ವವು ಮಹಿಳೆಯರ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಆರ್ಥಿಕ ಭಾಗವಹಿಸುವಿಕೆಯನ್ನು ಹೆಚ್ಚಿಸಿರುವುದು ಕಂಡುಬರುತ್ತದೆ. ಒಟ್ಟು 50 ಮಾಹಿತಿದಾರರಲ್ಲಿ ಶೇಕಡ 78ರಷ್ಟು ಮಹಿಳೆಯರು ಕುಟುಂಬದ ಆದಾಯ ಮತ್ತು ವೆಚ್ಚದ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದಾರೆ, ಶೇಕಡ 86ರಷ್ಟು ಮಹಿಳೆಯರು ಮಕ್ಕಳ ಶಿಕ್ಷಣದ ವೆಚ್ಚಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದಾರೆ. ಶೇಕಡ

62ರಷ್ಟು ಮಹಿಳೆಯರು ಉಳಿತಾಯ ಮತ್ತು ಆಸ್ತಿ ಸಂಬಂಧಿತ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದಾರೆ ಶೇಕಡ 80ರಷ್ಟು ಮಹಿಳೆಯರು ತಮ್ಮ ಸ್ವಂತ ಆದಾಯದ ಬಳಕೆಯನ್ನು ತಾವೇ ನಿರ್ಧರಿಸುತ್ತಿದ್ದಾರೆ. ಇದರಿಂದ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರಲ್ಲಿ ಆರ್ಥಿಕ ಅರಿವು, ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಹೆಚ್ಚಾಗಿದೆ ಎಂದು ತಿಳಿಯುತ್ತದೆ. ಆರ್ಥಿಕವಾಗಿ ಮಹಿಳೆಯರು ಕುಟುಂಬಕ್ಕೆ ಕೊಡುಗೆ ನೀಡುವುದರಿಂದ ಕುಟುಂಬದ ಸಂಪನ್ಮೂಲಗಳ ಬಳಕೆಯಲ್ಲಿ ಅವರ ಪಾತ್ರವೂ ಹೆಚ್ಚಾಗುತ್ತದೆ. ಆದ್ದರಿಂದ, ಸ್ವಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಕುಟುಂಬದ ಆರ್ಥಿಕ ಸ್ಥಿರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

**ಸಂಶೋಧನೆಯಿಂದ ವ್ಯಕ್ತವಾದ ಅಂಶಗಳು**

- ಮಹಿಳೆಯರು ಸ್ವಸಹಾಯ ಗುಂಪುಗಳಿಗೆ ಸೇರುವುದರ ಹಿಂದಿನ ಉದ್ದೇಶ ಆರ್ಥಿಕ ಅಂಶಗಳನ್ನು ಆಧರಿಸಿಯೇ ಇರುತ್ತದೆ. ಹಾಗಾಗಿ ಅವರು ತಮ್ಮ ಆರ್ಥಿಕ ಅಭಿವೃದ್ಧಿಯ ಜೊತೆಗೆ ಸ್ವಾವಲಂಭಿ ಬದುಕನ್ನು ಕಟ್ಟಿಕೊಳ್ಳಲು ಈ ರೀತಿಯ ಸಂಘಗಳನ್ನು ಸೇರುವುದರ ಜೊತೆಗೆ ಮಹಿಳಾ ಸಬಲೀಕರಣದತ್ತ ಸಾಗುತ್ತಿದ್ದಾರೆ. ಹಾಗಾಗಿ ಮಹಿಳೆಯರ ಆರ್ಥಿಕ ನಿರ್ಧಾರಕಗಳು ಅಭಿವೃದ್ಧಿ, ಬದಲಾವಣೆ, ಸ್ವಾವಲಂಬನೆ ಹಾಗೂ ಸಬಲೀಕರಣದಂತಹ ಅಂಶಗಳನ್ನು ಬಲಪಡಿಸುವಲ್ಲಿ ಸಹಕಾರಿಯಾಗಿವೆ.
- ಉಳಿತಾಯವು ಬಂಡವಾಳ ನಿರ್ಮಾಣದ ಪ್ರಮುಖ ಆಧಾರವಾಗಿದೆ. ಮಹಿಳೆಯರು ಸಣ್ಣ ಪ್ರಮಾಣದಲ್ಲಿ ನಿಯಮಿತವಾಗಿ ಉಳಿತಾಯ ಮಾಡುವುದರಿಂದ ಅವರ ಆರ್ಥಿಕ ಭದ್ರತೆ ಹೆಚ್ಚುತ್ತದೆ. ಇದರಿಂದ ಕುಟುಂಬದ ಆರ್ಥಿಕ ಸ್ಥಿರತೆ ಸುಧಾರಿಸುವುದರ ಜೊತೆಗೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಯೂ ಹೆಚ್ಚುತ್ತದೆ.
- ಸ್ವಸಹಾಯ ಸಂಘಗಳ ಸಾಲವು ಉತ್ಪಾದಕ ಬಂಡವಾಳವಾಗಿ ಕಾರ್ಯನಿರ್ವಹಿಸುತ್ತದೆ. ಸಾಲವನ್ನು ಸಣ್ಣ ಉದ್ಯಮ, ಪಶುಸಂಗೋಪನೆ, ಹೊಲಿಗೆ, ಆಹಾರ ಉತ್ಪಾದನೆ, ವ್ಯಾಪಾರ ಮುಂತಾದ ಚಟುವಟಿಕೆಗಳಿಗೆ ಬಳಸುವುದರಿಂದ ಮಹಿಳೆಯರಿಗೆ ಆದಾಯದ ಮೂಲ ಸೃಷ್ಟಿಯಾಗುತ್ತದೆ. ಇದರಿಂದ ನಿರುದ್ಯೋಗ ಕಡಿಮೆಯಾಗುವುದರ ಜೊತೆಗೆ ಕುಟುಂಬದ ತಲಾ ಆದಾಯ ಮತ್ತು ಜೀವನಮಟ್ಟ ಸುಧಾರಿಸಲು ಸಹಾಯವಾಗುತ್ತದೆ.
- ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರಲ್ಲಿ ಆರ್ಥಿಕ ಅರಿವು, ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಹೆಚ್ಚಾಗಿದೆ ಎಂದು ತಿಳಿಯುತ್ತದೆ. ಆರ್ಥಿಕವಾಗಿ ಮಹಿಳೆಯರು ಕುಟುಂಬಕ್ಕೆ ಕೊಡುಗೆ ನೀಡುವುದರಿಂದ ಕುಟುಂಬದ ಸಂಪನ್ಮೂಲಗಳ ಬಳಕೆಯಲ್ಲಿ ಅವರ ಪಾತ್ರವೂ ಹೆಚ್ಚಾಗುತ್ತದೆ. ಆದ್ದರಿಂದ, ಸ್ವಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಕುಟುಂಬದ ಆರ್ಥಿಕ ಸ್ಥಿರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

**ಉಪಸಂಹಾರ**

ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ಅಧ್ಯಯನ ಮಾಡಿದಾಗ, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆ ತರಲು ಸ್ವಸಹಾಯ ಸಂಘಗಳು ಪರಿಣಾಮಕಾರಿ ಸಾಧನವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ. ವಿಶೇಷವಾಗಿ ಗ್ರಾಮೀಣ ಮತ್ತು ಕಡಿಮೆ ಆದಾಯದ ಕುಟುಂಬಗಳಿಗೆ ಸೇರಿದ ಮಹಿಳೆಯರಿಗೆ ಸ್ವಂತ ಉಳಿತಾಯ, ಸಾಲ ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸುವ ಮೂಲಕ ಅವರ ಜೀವನದಲ್ಲಿ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತಿವೆ. ಮಹಿಳೆಯರು ಒಟ್ಟಾಗಿ ಸಂಘಟಿತರಾಗಿ ಉಳಿತಾಯ ಮಾಡುವುದರಿಂದ ಅವರಲ್ಲಿ ಹಣಕಾಸಿನ

ಶಿಸ್ತು ಬೆಳೆಯುತ್ತದೆ. ಸಣ್ಣ ಮೊತ್ತದ ಉಳಿತಾಯದಿಂದ ಪ್ರಾರಂಭವಾದ ಚಟುವಟಿಕೆ ಕ್ರಮೇಣ ದೊಡ್ಡ ಆರ್ಥಿಕ ಸಹಕಾರದ ರೂಪವನ್ನು ಪಡೆದುಕೊಳ್ಳುತ್ತದೆ. ಈ ಪ್ರಕ್ರಿಯೆಯು ಮಹಿಳೆಯರಲ್ಲಿ ಹಣದ ಮೌಲ್ಯ, ಉಳಿತಾಯದ ಅಗತ್ಯ ಮತ್ತು ಭವಿಷ್ಯದ ಆರ್ಥಿಕ ಯೋಜನೆಯ ಬಗ್ಗೆ ಅರಿವನ್ನು ಹೆಚ್ಚಿಸುತ್ತದೆ. ಹೀಗಾಗಿ ಸ್ವಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ಒಂದು ಬಲವಾದ ಆಧಾರವನ್ನು ಒದಗಿಸುತ್ತವೆ.

ಅಧ್ಯಯನದಲ್ಲಿ ಪರಿಗಣಿಸಿರುವ ಮಾಹಿತಿಯನ್ನು ಗಮನಿಸಿದಾಗ, ಸ್ವಸಹಾಯ ಸಂಘಗಳ ಸದಸ್ಯತ್ವವು ಕುಟುಂಬದ ಆದಾಯ ಮತ್ತು ವೆಚ್ಚದ ನಿರ್ಧಾರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿರುವುದು ಕಂಡುಬರುತ್ತದೆ. ಮಹಿಳೆಯರು ತಮ್ಮ ಆದಾಯವನ್ನು ಗಳಿಸಲು ಪ್ರಾರಂಭಿಸಿದಾಗ ಆ ಆದಾಯವನ್ನು ಹೇಗೆ ಬಳಸಬೇಕು ಎಂಬುದರ ಕುರಿತು ಅವರ ಅಭಿಪ್ರಾಯವೂ ಮಹತ್ವ ಪಡೆಯುತ್ತದೆ. ಮಕ್ಕಳ ಶಿಕ್ಷಣ, ಕುಟುಂಬದ ಉಳಿತಾಯ, ಮನೆಯ ಖರ್ಚು, ಆರೋಗ್ಯ ಸಂಬಂಧಿತ ವೆಚ್ಚ ಮತ್ತು ಇತರ ಅಗತ್ಯಗಳಿಗೆ ಹಣವನ್ನು ಹೇಗೆ ಬಳಸಬೇಕು ಎಂಬ ನಿರ್ಧಾರಗಳಲ್ಲಿ ಮಹಿಳೆಯರು ಹೆಚ್ಚಿನ ಪಾತ್ರ ವಹಿಸುತ್ತಾರೆ. ಇದರಿಂದ ಕುಟುಂಬದ ಸಂಪನ್ಮೂಲಗಳ ಬಳಕೆ ಹೆಚ್ಚು ಯೋಜಿತವಾಗಲು ಸಹಾಯವಾಗುತ್ತದೆ. ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚುವುದು ಆರ್ಥಿಕ ಸಬಲೀಕರಣದ ಪ್ರಮುಖ ಸೂಚಕವಾಗಿದೆ. ಒಟ್ಟಾರೆಯಾಗಿ ನೋಡಿದಾಗ, ಸ್ವಸಹಾಯ ಸಂಘಗಳು ಮಹಿಳೆಯರ ಅಭಿವೃದ್ಧಿಯಲ್ಲಿ ಬಹುಮುಖ ಪಾತ್ರವನ್ನು ವಹಿಸುತ್ತಿವೆ. ಅವು ಮಹಿಳೆಯರಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುತ್ತವೆ, ಅಗತ್ಯವಿದ್ದಾಗ ಸಾಲ ಸೌಲಭ್ಯ ಒದಗಿಸುತ್ತವೆ, ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡುತ್ತವೆ, ಆದಾಯ ಗಳಿಸುವ ಅವಕಾಶವನ್ನು ಸೃಷ್ಟಿಸುತ್ತವೆ ಮತ್ತು ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತವೆ. ಇದರ ಜೊತೆಗೆ ಆತ್ಮವಿಶ್ವಾಸ, ನಾಯಕತ್ವ, ಸಾಮಾಜಿಕ ಭಾಗವಹಿಸುವಿಕೆ ಮತ್ತು ಹಣಕಾಸಿನ ಅರಿವು ಹೆಚ್ಚಿಸುವ ಮೂಲಕ ಮಹಿಳೆಯರ ಒಟ್ಟಾರೆ ಸಬಲೀಕರಣಕ್ಕೆ ಸಹಕಾರ ನೀಡುತ್ತವೆ. ಹೀಗಾಗಿ ಸ್ವಸಹಾಯ ಸಂಘಗಳನ್ನು ಕೇವಲ ಉಳಿತಾಯ ಮತ್ತು ಸಾಲದ ಸಂಘಗಳೆಂದು ಪರಿಗಣಿಸುವುದಕ್ಕಿಂತ, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗೆ ಸಹಾಯ ಮಾಡುವ ಅಭಿವೃದ್ಧಿ ಸಂಸ್ಥೆಗಳೆಂದು ಪರಿಗಣಿಸುವುದು ಸೂಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**


- Brody, C., De Hoop, T., Vojtkova, M., Warnock, R., Dunbar, M., Murthy, P., & Dworkin, S. L. (2017). Can self-help group programs improve women's empowerment? A systematic review. *Journal of Development Effectiveness*. 9(1), 15–40.
- Kabeer, N. (1999). Resources, agency, achievements: Reflections on the measurement of women's empowerment. *Development and Change*. 30 (3), 435–464. https://doi.org/10.1111/1467-7660.00125
- Ministry of Rural Development. (2025, February 11). *Self-help groups*. Press Information Bureau, Government of India.
- Mukhopadhyay, P., Sinha, M., Ray Chaudhury, A., & Sengupta, P. P. (2018). Microfinance, micro-entrepreneurial activities through

self-help groups, and socio-economic empowerment of women: A study of Burdwan district of West Bengal, India. *In* R. C. Das (Ed.), *Microfinance and its impact on entrepreneurial development, sustainability, and inclusive growth* (pp. 85–102). IGI Global. https://doi.org/10.4018/978-1-5225-5213-0.ch005

- *National Bank for Agriculture and Rural Development. (2024). Self-help group-bank linkage programme: Highlights 2023–24*. NABARD.
- National Bank for Agriculture and Rural Development. (2024). *Status of microfinance in India 2023–24*. NABARD.
- Reserve Bank of India. (2024). *Master circular on self-help group-bank linkage programme*. Reserve Bank of India.
- Swain, R. B. (2006). *Microfinance and women's empowerment: Evidence from the self-help group bank linkage programme in India*. Sida.
- Swain, R. B., & Wallentin, F. Y. (2009). Does microfinance empower women Evidence from self-help groups in India. *International Review of Applied Economics*, 23 (5) 541–556.
- Swain, R. B., & Wallentin, F. Y. (2012). Factors empowering women in Indian self-help group programs. *International Review of Applied Economics*, 26(4).